# ಸ್ತ್ರೀವಾದಿ ಹಿನ್ನೆಲೆಯಲ್ಲಿ 'ಭೂಮಿಯಲ್ಲ ಇವಳು'

**ವಾಣಿ ಬಿ.ಎನ್.***

**DOI: https://doi.org/10.5281/zenodo.20106495**

**ABSTRACT**

ಹೆಚ್.ಎಲ್. ಪುಷ್ಪ ಅವರು ರಚಿಸಿದ 'ಭೂಮಿಯಲ್ಲ ಇವಳು' ನಾಟಕವು ಜನ್ನನ 'ಯಶೋಧರ ಚರಿತೆ'ಯ ಅಮೃತಮತಿಯ ಪಾತ್ರವನ್ನು ಆಧುನಿಕ ಸ್ತ್ರೀವಾದಿ ನೆಲೆಗಟ್ಟಿನಲ್ಲಿ ಮರುಸೃಷ್ಟಿಸಿದೆ. ಪುರುಷಪ್ರಧಾನ ಸಮಾಜದ ಕಟ್ಟುಪಾಡುಗಳನ್ನು ಧಿಕ್ಕರಿಸಿ, ತನ್ನ ಆಸೆ-ಆಕಾಂಕ್ಷೆಗಳ ಈಡೇರಿಕೆಗಾಗಿ ಹಾಗೂ ಆಂತರಿಕ ನೆಮ್ಮದಿಗಾಗಿ ಹಾತೊರೆಯುವ ದಿಟ್ಟ ಮಹಿಳೆಯಾಗಿ ಅಮೃತಮತಿ ಇಲ್ಲಿ ಮೂಡಿಬಂದಿದ್ದಾಳೆ. ಯಾಂತ್ರಿಕವಾದ ರಾಜವೈಭೋಗವನ್ನು ತಿರಸ್ಕರಿಸಿ, ತನ್ನಿಚ್ಛೆಯ ಬದುಕನ್ನು ಅರಸುವ ಅವಳ ತುಡಿತವನ್ನು ಕೃತಿಯು ಸೂಕ್ಷ್ಮವಾಗಿ ಕಟ್ಟಿಕೊಡುತ್ತದೆ. ಇದರೊಟ್ಟಿಗೆ, ರಾಣಿ, ಸೇವಕಿ ಮಾದೇವಿ ಮತ್ತು ವೇಶ್ಯೆ ತಿಮ್ಮಕ್ಕನ ಪಾತ್ರಗಳ ಮೂಲಕ ವಿಭಿನ್ನ ವರ್ಗದ ಮಹಿಳೆಯರ ಬದುಕಿನ ಬವಣೆ, ಅಸಹಾಯಕತೆ ಮತ್ತು ಅವರ ಬಂಡಾಯದ ಮನಸ್ಥಿತಿಯನ್ನು ವಿಶ್ಲೇಷಿಸಲಾಗಿದೆ. ಪೌರಾಣಿಕ ಕಥಾವಸ್ತುವಿನ ಮೂಲಕ ವರ್ತಮಾನದ ಸ್ತ್ರೀ ಸಂವೇದನೆ, ಅವಳ ಬಿಡುಗಡೆಯ ಹಂಬಲ ಹಾಗೂ ಬದಲಾದ ಆಲೋಚನಾ ಕ್ರಮಗಳನ್ನು ಈ ವಿಶ್ಲೇಷಣೆಯು ಅತ್ಯಂತ ಮಾರ್ಮಿಕವಾಗಿ ತೆರೆದಿಡುತ್ತದೆ.

**KEYWORDS:** ಭೂಮಿಯಲ್ಲ ಇವಳು, ಸ್ತ್ರೀವಾದಿ ಚಿಂತನೆ, ಅಮೃತಮತಿ, ಮಹಿಳಾ ಸಂವೇದನೆ, ಹೆಚ್.ಎಲ್. ಪುಷ್ಪ.

* **ವಾಣಿ ಬಿ.ಎನ್.,** ಸಂಶೋಧನಾರ್ಥಿ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

ಆಧುನಿಕ ಮಹಿಳಾ ಸ್ತ್ರೀವಾದಿ ಚಿಂತನೆಯಲ್ಲಿ ರಚಿತವಾಗಿರುವ ನಾಟಕ 'ಭೂಮಿಯಲ್ಲ ಇವಳು' ಲೇಖಕಿ ಹೆಚ್.ಎಲ್ ಪುಷ್ಪರವರು. ಜನ್ನನ ಯಶೋಧರ ಚರಿತೆಯ ಅಮೃತಮತಿಯನ್ನು ಆಧರಿಸಿ ಹೆಣೆಯಲ್ಪಟ್ಟ ನಾಟಕ ಇದಾಗಿದೆ. ನಾಟಕದ ಶೀರ್ಷಿಕೆಯೇ ಸೂಚಿಸುವಂತೆ "ಭೂಮಿಯಲ್ಲ ಇವಳು" ಇಲ್ಲಿಯ ಅಮೃತಮತಿ ಎಲ್ಲವನ್ನೂ ಸಹಿಸುವ ಸಹನಶೀಲೆಯಲ್ಲ ಬದಲಾಗಿ ಸಮಾಜ ನಿರೀಕ್ಷಿಸುವುದನ್ನು ಮೀರಿ ವರ್ತಿಸುವಾಕೆ ತನಗೆ ಬೇಕಾದದ್ದನ್ನು ಪಡೆಯುವ ಹಂಬಲವಿರುವವಕೆ. ಇದು ಆಧುನಿಕ ಮಹಿಳಾಪರ ದೃಷ್ಟಿಕೋನವನ್ನು ಒಳಗೊಂಡ ಅಮೃತಮತಿಯ ವ್ಯಕ್ತಿತ್ವ ಆಧುನಿಕ ಸ್ತ್ರೀವಾದಿ ನಿಲುವುಗಳೊಂದಿಗೆ ರೂಪುಗೊಂಡಿದೆ. ನಾಟಕದಲ್ಲಿ ಅಮೃತಮತಿ ತನ್ನದೆಂದು ಸಮಾಜ ಒಡ್ಡಿರುವ ನಿಯಮಗಳನ್ನು ಉಲ್ಲಂಘಿಸುವ ಮೂಲಕ ಪುರುಷ ಪ್ರಾಧಾನ್ಯತೆಯನ್ನು ಧಿಕ್ಕರಿಸುವ ಮನಸ್ಥಿತಿಯುಳ್ಳವಳಾಗಿದ್ದಾಳೆ. "ಹೀಗೆ ಭೂಮಿಯಲ್ಲ ಇವಳು ನಾಟಕ ಗತಕಾಲದ ಕಥಾವಸ್ತುವಿನ ಮೂಲಕ ವರ್ತಮಾನದ ಸಂದಿಗ್ಧತೆಯ ಪರಿಶೀಲನೆಯ ಕಡೆಗೆ ಮುಖ ಮಾಡಿಕೊಂಡಿದೆ"1 ಎಂದು ಬಂಜಗೆರೆ ಜಯಪ್ರಕಾಶರವರ ಮಾತುಗಳು ಸೂಕ್ತವಾಗಿವೆ.

ಡಾ. ಡಿ.ಆರ್ ನಾಗರಾಜು ಅವರು ಹೇಳುವಂತೆ "ವರ್ತಮಾನದ ಬಿಕ್ಕಟ್ಟುಗಳಿಗೆ ಈಗ ಲಭ್ಯವಿರುವ ಚಿಂತನಕ್ರಮಗಳು ಮತ್ತಷ್ಟು ಸಂಕೀರ್ಣಗೊಳಿಸುವಲ್ಲಿ ಜಾಗತೀಕರಣ ಆವರಿಸಿದೆ. ಹಿಂದೆ ವಸಾಹತುವಿನ ಮರೆಯಲ್ಲಿ ಎಲ್ಲಾ ಕಥಾನಕಗಳು ವಿಸ್ಮೃತಿಗೆ ತಲ್ಪಟ್ಟವುಗಳಾದವು ಅಂತಹ ಮಹಾ ವಿಸ್ಮೃತಿಗಳಿಗೆ ಒಳಗಾದ ಕಥಾನಕಗಳು ಆಧುನಿಕ ನಾಟಕ ರಚನೆಗೆ ವರ್ತಮಾನದ ವಾಸ್ತವ ಬದುಕನ್ನು ಅರ್ಥಮಾಡಿಕೊಳ್ಳಲು ಒದಗಿಬರುವಂತೆ 'ಭೂಮಿಯಲ್ಲ ಇವಳು' ನಿರೂಪಣೆಗೊಂಡಿದೆ ಅಮೃತಮತಿಯ ಕಥನ ಹಳೆಯದಾದರೂ ಆಧುನಿಕ ಸೃಷ್ಟಿಸುವ ಬದುಕಿನ ಜಟಿಲತೆಗೆ ಕನ್ನಡಿಯಾಗಿದೆ"2.

ಈ ನಾಟಕ 15 ದೃಶ್ಯಗಳಲ್ಲಿ ಫ್ಲ್ಯಾಶ್‌ಬ್ಯಾಕ್ ತಂತ್ರದ ಮೂಲಕ ರೂಪಿಸಲ್ಪಟ್ಟಿದೆ. ದೃಶ್ಯ ಒಂದರಲ್ಲಿಯೇ ಯಶೋಧರ ಮತ್ತು ಅವನ ತಾಯಿ ಚಂದ್ರಮತಿ ಅಣ್ಣ ತಂಗಿಯಾಗಿ ಜನ್ಮಾಂತರಗಳಲ್ಲಿ ಹುಟ್ಟಿ ರಾಣಿ ಅಮೃತಮತಿಯ ಅರಮನೆಗೆ ಬೇಡಲು ಬಂದಿರುತ್ತಾರೆ. ಆದರೆ ರಾಣಿ ಮತ್ತು ಆಕೆಯ ಪ್ರಿಯಕರ ಬದುಗ ಯಶೋಧರ ಮತ್ತು ಅವನ ತಾಯಿ ಪೂರ್ವ ಜನ್ಮದಲ್ಲಿ ಕೋಣ ಮತ್ತು ಆಡು ಪ್ರಾಣಿಗಳಾಗಿದ್ದಾಗ ಅವುಗಳನ್ನು ಕೊಂದು ಮಾಂಸ ಸೇವಿಸುವ ತವಕದಲ್ಲಿದ್ದವರಿಗೆ ಈ ಮಕ್ಕಳ ಆಗಮನದಿಂದ ಅನಿರೀಕ್ಷಿತವಾಗಿ ಅಮೃತಮತಿ ಭೂತಕಾಲದ ಘಟನೆಗಳನ್ನ ಮೆಲುಕು ಹಾಕುತ್ತಾ ಕೌತುಕಗೊಂಡರೆ ಎಲ್ಲವನ್ನೂ ತಿಳಿದ ಅಣ್ಣ ತಂಗಿ ಮಾತ್ರ ಏನೂ ತಿಳಿಯದವರಂತೆ ಭಿಕ್ಷೆ ಸ್ವೀಕರಿಸಿ ಕೊಳೆಗೇರಿಯ ಬಳಿ ಬಂದಾಗ ಅಲ್ಲಿ ಅಜ್ಜಿ ಕೇಳಿದ ಪ್ರಶ್ನೆಗಳಿಗೆ ಉತ್ತರಿಸುತ್ತಾ ತನ್ನ ಜನ್ಮಾಂತರದ ಕಥೆಯನ್ನು ವ್ಯಥೆಯಿಂದ ತಿಳಿಸಿ ಸಾಗುತ್ತಾರೆ. ನಂತರದಲ್ಲಿ ಅಮೃತಮತಿಯ ಕತೆ ತೆರೆದುಕೊಳ್ಳುತ್ತದೆ ನಾಟಕದ ಮುಖ್ಯ ಬೆಳವಣಿಗೆ ನಾಲ್ಕನೆಯ ದೃಶ್ಯದಿಂದ ಆರಂಭವಾಗುತ್ತದೆ.

ಯಶೋಧರನ ರಾಣಿಯಾದ ಅಮೃತಮತಿ ಯಾವುದೋ ಚಿಂತೆಯಲ್ಲಿ

ತನಗರಿವಿಲ್ಲದೆ ಮುಳುಗಿರುವ ರಾಣಿ ತನ್ನ ಚಿಂತೆಯ ಮೂಲ ಹುಡುಕಲು ತವಕಿಸುತ್ತಿರುವ ಆಕೆಗೆ ಬದುಕಿನ ಎಲ್ಲಾ ವಿಷಯಗಳಲ್ಲಿಯೂ ಅನಾಸಕ್ತಿ ಮೂಡಿರುತ್ತದೆ. ಸ್ವತಃ ತನ್ನ ಗಂಡನು ರಾಜ್ಯದ ಪೋಷಕನು ಆದ ತನ್ನ ಗಂಡನಲ್ಲಿ ಪ್ರೀತಿ ಕಡಿಮೆಯಾಗಿ ಆತನ ಬರುವಿಕೆಯೂ ಈಕೆಗೆ ಜಿಗುಪ್ಸೆಯುಂಟು ಮಾಡುತ್ತದೆ. "ಗಂಡನೆಂದರೆ ಸತ್ಕರಿಸಿಕೊಳ್ಳುವ ಅತಿಥಿಯೇನು ಅಲ್ಲವಲ್ಲ" ಎನ್ನುವ ಆಕೆಯ ಮಾತು ಆಕೆಗೆ ಗಂಡನ ಮೇಲಿರುವ ನಿರಾಸಕ್ತಿ ತೋರಿಸುತ್ತದೆ. ಅದನ್ನು ಯಾವುದೇ ಮುಚ್ಚುಮರೆಯಿಲ್ಲದೆ ಗಂಡನೊಂದಿಗೆ ನೇರವಾಗಿ ಹಂಚಿಕೊಳ್ಳುವ ಆಕೆಯ ಮನಸ್ಥಿತಿ ಆಕೆಯ ನಿಲುವು ಗಟ್ಟಿಯಾಗಿರುವುದನ್ನು ಸೂಚಿಸುತ್ತದೆ. ಅದಕ್ಕೆ ರಾಜ ಸಮಾಧಾನದ ಮಾತುಗಳನ್ನಾಡಿದಾಗ ಆಕೆ ನೀಡಿದ ಉತ್ತರ "ನೀವು ಸಂತೈಸಿದ ಮಾತ್ರಕ್ಕೆ ನನ್ನೊಳಗಿನ ಬೆಂಕಿ ತಣ್ಣಗಾಗುವುದಿಲ್ಲ. ಈ ದಿನದ ಬದುಕಿಗಿಂತ ಮಿಗಿಲಾದದ್ದು ಬೇಕು ಎನಿಸುತ್ತಿದೆ". ಎಂಬ ಮಾತುಗಳಲ್ಲಿ ಆಕೆಯು ರಾಣಿಯಾಗಿ ನಡೆಸುತ್ತಿರುವ ಯಾಂತ್ರಿಕ ಬದುಕಿನ ನಿಸ್ಸಾರತೆಯನ್ನು ತೆರೆದಿಡುತ್ತದೆ.

ಆಕೆ ರಾಜನೊಂದಿಗೆ ಹಂಚಿಕೊಳ್ಳುವ ತನ್ನ ಮನೋಚಿಂತನೆಯಾದ "ನನ್ನೊಳಗಿನ ಒಂದು ಧ್ವನಿ ನಿತ್ಯ ಮಾತನಾಡುತ್ತದೆ. ಅದು ಬಿಳಿಪಾರಿವಾಳಗಳ ಜೊತೆ ಹಾರಿ, ಓಡೋ ಜಿಂಕೆಗಳ ಜೊತೆ ಓಡಬೇಕೆನ್ನುತ್ತದೆ". ಎಂಬುದು ಆಕೆ ಯಾಂತ್ರಿಕ ಬದುಕಿನಿಂದ ಹೊರಬರಬೇಕೆಂಬ ಯೋಚನೆಯಲ್ಲಿದ್ದಾಳೆ ರಾಜ ನೇರವಾಗಿ ಅಮೃತಮತಿಯನ್ನು ನಾನು ಬೇಸರದ ಹಳೆಯ ಗಂಡನಿರಬಹುದೇ ಎಂದಾಗಲೂ ಆಕೆ ನೀಡುವ ಉತ್ತರದಲ್ಲಿ ಆಕೆಯ ಮುಂದಿನ ನಡೆಯ ಸುಳಿವುಗಳಿವೆ. ರಾಣಿಗೆ ಈ ರೀತಿಯ ಮನಸ್ಥಿತಿ ಉಂಟಾಗಲು ಕಾರಣಗಳೇನೆಂಬುದನ್ನು 6ನೇ ದೃಶ್ಯದಲ್ಲಿ ತಿಳಿಯುತ್ತದೆ. ದೊರೆಯಲ್ಲಿರುವುದು ಸಿರಿವಂತಿಕೆ, ನಾನು ದೊರೆ, ದೊರೆಯ ಬಿಡುವಿಲ್ಲದ ರಾಜಕಾರ್ಯ, ರಾಜನಲ್ಲಿರುವ ಅಧಿಕಾರಯುತ ದರ್ಪದ ಮನಸ್ಥಿತಿ "ನಾನು ರಾಜ ನಾನು ಬಯಸಿದ ಹಾಗೆಯೇ ಎಲ್ಲಾ ನಡೆಯಬೇಕು ಈ ಎಲ್ಲಾ ರಾತ್ರಿಗಳೂ ನನ್ನವೇ ಆಗಬೇಕು ನಾವು ನಾವು ಅರಸರು ಭೋಗವೆಂಬುದು ನಮ್ಮ ತುದಿಯ ಮೇಲಿನ ಗಿಳಿಯಲ್ಲವೇ" ಇಂತಹ ರಾಜನಾಡುವ ಮಾತುಗಳು ರಾಜನ ಮನಸ್ಥಿತಿಗೆ ಹಾಗೂ ರಾಜನಿಗೆ ಮಾತ್ರ ಇದ್ದ ಎಲ್ಲಾ ಆಯ್ಕೆಗಳ ಸ್ವಾತಂತ್ರ್ಯಗಳಿಂದ ಬೇಸತ್ತ ಅಮೃತಮತಿ ರಾಜನೊಡನೆ ನಡೆಸುವ ನೀರಸ ಬದುಕಿಗಿಂತ ಬೇರೆ ಬದುಕಿನಡೆ ನಡೆಯಲು ಯತ್ನಿಸುತ್ತಿರುತ್ತಾಳೆ. ಆಕೆ ತನಗೆ ಬೇಕಾದಾಗ ತನ್ನ ಬಳಿ ಬರುವ ಗಂಡನಿಗಿಂತ ತನಗಾಗಿಯೇ ತನ್ನ ಬಳಿ ಸದಾ ಇರುವ ಗಂಡನ ಮನಸ್ಥಿತಿಯನ್ನು ಹಂಬಲಿಸಲು ಪ್ರಾರಂಭಿಸುತ್ತಾಳೆ.

ರಾಣಿ ಹಾಗೂ ಆಕೆಯ ಸೇವಕಿ ಮಾದೇವಿ ಇಬ್ಬರಲ್ಲಿಯ ಸಂಭಾಷಣೆಯಲ್ಲಿ ಎರಡು ವಿಭಿನ್ನ ನೆಲೆಗಳು ಎದುರುಗೊಳ್ಳುತ್ತವೆ. ರಾಣಿಗೆ ಲೌಕಿಕ ಜೀವನದಲ್ಲಿ ಬೇಕಾದ ಎಲ್ಲಾ ಅಗತ್ಯಗಳೂ ಇವೆ. ರಾಣಿ ಅದರಾಚೆಗಿನ ಸ್ವತಂತ್ರವಾದ ಬಿಡುಗಡೆಯ ಬದುಕನ್ನು ಪಡೆಯಲು ಹಂಬಲಿಸುತ್ತಿರುತ್ತಾಳೆ. ಆದರೆ ಮಾದೇವಿಯ ಅಗತ್ಯತೆಗಳೇ ಬೇರೆಯಾಗಿರುತ್ತವೆ. ಆಕೆಗೆ ದೈನಂದಿನ ಜೀವನದವನ್ನು ಎದುರುಗೊಳ್ಳುವುದು

ದುಸ್ತರವಾಗಿರುತ್ತದೆ. ಅದನ್ನು ಹೀಗೆ ಹೇಳುತ್ತಾಳೆ. "ನನಗೂ ಬದುಕು ಒಂದು ಹೋರಾಟದ ಹಾಗೆ ಒಂದೆಡೆ ಅನ್ನಕ್ಕಾಗಿ ನೆರಳಿಗಾಗಿ ಒದ್ದಾಡಿದರೆ ಮತ್ತೊಂದೆಸೆ ಕುಡಿಯುವ ಗಂಡ ಹರಕು ಬಾಯಿ ಅತ್ತೆ ಜೊತೆ ಕಾದಾಟ ಆದರೂ ರಾತ್ರಿಗಾಗಿ ಕಾಯುತ್ತೇನೆ ಬೆಳಗಾಗಲೆಂದು ಕೂತಿರುತ್ತೇನೆ ಎಲ್ಲಾ ಸರಿಯಾಗಿರೋ ಇವಳಿಗೆ ಯಾವುದೋ ಲೋಕದ ನಕ್ಷತ್ರ ಕೀಳುವ ತವಕ ಇರಲಿ ಬಿಡಿ. ಇದು ದೊಡ್ಡೋರ ಬದುಕು ನಮಗೇಕೆ ಅಧಿಕ ಪ್ರಸಂಗತನ".

ರಾಣಿ ಮತ್ತು ಮಾದೇವಿಯ ಸಮಸ್ಯೆಗಳು ಬೇರೆ ಬೇರೆಯಾಗಿರುವಂತೆ ಸಮಾಜದಲ್ಲಿಯ ಎಲ್ಲಾ ರೀತಿಯ ಮಹಿಳೆಯರು ಸಮಸ್ಯೆಗಳಿಗೆ ಒಳಗಾಗಿರುತ್ತಾರೆ. ಬಡವರ್ಗದ ಮಹಿಳೆಯ ಸಮಸ್ಯೆಗಳು ಒಂದು ರೀತಿಯದ್ದಾಗಿದ್ದರೆ ಮಧ್ಯಮ ವರ್ಗದ ಮಹಿಳೆಯ ಸಮಸ್ಯೆಗಳು ಮತ್ತೊಂದು ರೀತಿಯಾಗಿರುತ್ತವೆ.ಹಾಗೆಯೇ ಕೊಳಗೇರಿ ವರ್ಗದ ವೇಶ್ಯೆಯರ ಸಮಸ್ಯೆಗಳೇನಿವೆ ಎಂಬುದನ್ನು ನಾಟಕದಲ್ಲಿ ಗುರುತಿಸಬಹುದಾಗಿದೆ. ಇದು ತಿಮ್ಮಕ್ಕ ಎಂಬ ಅಜ್ಜಿ ಪಾತ್ರದ ಮೂಲಕ ತೆರೆದುಕೊಳ್ಳುತ್ತದೆ. ಅಜ್ಜಿಯು ವೇಶ್ಯೆ ಜೀವನ ಹೇಗಿರುತ್ತದೆಂಬ ಅನುಭವ ಹೊಂದಿದ್ದಾಳೆ. ಈಗಲೂ ಅಲ್ಲಿನ ಹೆಣ್ಣು ಮಕ್ಕಳು ಜೀವನ ಸಾಗಿಸಲು ಮುಂದುವರೆಸಿಕೊಂಡು ಬಂದಿರುವ ವೇಶ್ಯಾವೃತ್ತಿಯು ಅಲ್ಲಿನ ಮಹಿಳೆಯರಿಗೆ ಹೇಗೆ ಅನಿವಾರ್ಯ ಎಂಬುದನ್ನು ಅಜ್ಜಿಯ ಮಾತುಗಳಲ್ಲಿ ತಿಳಿಯಬಹುದು. ಅಳುವ ಮಗುವನ್ನು ಸಂತೈಸುವ ಪರಿ ಒಂದೆಡೆ ಮಗುವನ್ನು ಮಲಗಿಸುವುದು ಮತ್ತೊಂದೆಡೆ ಬಂದಿರುವ ಗಂಡನನ್ನು ಸಂಭಾಳಿಸೋದು ಬಂದ ಗಂಡಸರು ನೀಡುವ ಹಣದಿಂದಲೇ ಇವರ ಹೊಟ್ಟೆ ಬಟ್ಟೆ ತುಂಬುವ ಪರಿ ಹೊಟ್ಟೆ ತುಂಬಿದವರು ದುಡ್ಡಿನಿಂದ ಅಳೆಯುತ್ತಾರೆಯೇ ಹೊರತು ಮನಸ್ಸಿನಿಂದಲ್ಲ ಎಂಬ ಅಜ್ಜಿಯ ಮಾತುಗಳಲ್ಲಿ ವೇಶ್ಯಾವೃತ್ತಿಯಲ್ಲಿರುವ ಹೆಣ್ಣು ಮಕ್ಕಳ ಬಗ್ಗೆ ಅಜ್ಜಿಗಿರುವ ಸಹಾನುಭೂತಿ ರಾಣಿಯ ಮೇಲಿಲ್ಲ.ರಾಣಿಯ ಈ ಬಗೆಗಿನ ಬದಲಾದ ಮನಸ್ಥಿತಿಯನ್ನು ಅಜ್ಜಿ ಈ ಮಾತುಗಳಲ್ಲಿ ಹೇಳಿದ್ದಾಳೆ.

"ಲೋಕದ ಹೆಣ್ಣು ಯಾಕೆ ಜಾರುತ್ತಾಳೆ ಸ್ವಾಮಿ ಗಂಡನ ಜತೆ ಆಕೆ ಜೀವನ ನದಿ ಸಳ ಸಳ ಹರಿದ್ಹಾಂಗೆ ಸಾಗಬೇಕು. ಎಲ್ಲಾದರೂ ಒಂದೀಟು ಅಡೆ ತಡೆಯಾದ್ರೆ ಆಕೆ ಕೊಳತು ನಾರುತ್ತಾಳೆ. ಹೆಣ್ಣು ನದೀ ಇದ್ಹ್ಹಾಂಗೆ ಆಕೀಗೆ ತೇಲಿಸೋದು ಗೊತ್ತು ಮುಳುಗಿಸೋದು ಗೊತ್ತು ನದೀನ ಯಾರು ತಡೆಯಾಕೆ ಆದೀತು. ಆಕೀಗೆ ಯಾರು ತಡೆಯಾಕೆ ಆದೀತು. ಆಕೆ ನದಿ ಸ್ವಾಮಿ ಮಹಾನದಿ ಆಕೆ" ಎಂದು ಪ್ರತಿಕ್ರಿಯಿಸುವ ಅಜ್ಜಿಗೆ ರಾಣಿಯ ಕೃತ್ಯದ ಬಗೆಗೆ ಅಸಮಾಧಾನವಿದೆ. ಆದರೆ ನಾಟಕದ ಕೊನೆಯಲ್ಲಿ ಮಾತ್ರ ಅಜ್ಜಿ,

"ಯಾರಿಗೆ ಕದ ತೆರೆದು ಕತ್ತಲಿಗೆ ಬರೋ ಧೈರ್ಯ ಐತಿ ಅವರು ತಮ್ಮ ಕಾಲ ಮೇಲೆ ತಾವೇ ನಿಲ್ತಾರ. ಉಳಿದೋರು ಧರ್ಮಾನ್ ದಿಕ್ಕು ಅಂತಾ ಅದರ ತೊಗಲು ಹೊದ್ದು ಒಳಗೆ ಬೇಯ್ತಾರ" ಎಂಬುದು ಹೆಣ್ಣು ಎಲ್ಲಾ ವಿಷಮ ಪರಿಸ್ಥಿತಿಯಲ್ಲೂ

ಮುನ್ನಡೆಯಬೇಕೆಂಬುದನ್ನು ತಿಳಿಸುತ್ತದೆ.

"ಯಾಕೆ ಹೆಂಗಸು ಆಳಬಾರದೇನು ಎಲ್ಲಿಯವರೆಗೂ ಅವಳನ್ನು ಕಾಮಕ್ಕೆ ಹಡಿಯಾಕೆ ಅಂತಾನೇ ಜನ ತಿಳ್ಕೊತಾರೋ ಅಲ್ಲಿಯವರೆಗೂ ಆಕೀಗೂ ದುರಂತ ತಪ್ಪಿದ್ದಲ್ಲ" ಎಂಬ ಅಜ್ಜಿಯ ಮಾತುಗಳಲ್ಲಿ ಹೆಣ್ಣಿನ ಬದಲಾದ ಮನಸ್ಥಿತಿಯನ್ನು ಪರಿಸ್ಥಿತಿಯನ್ನು ಸ್ವೀಕರಿಸುವ ಮನಸ್ಥಿತಿ ಅಜ್ಜಿಗಿದೆ.

ಗೊಂದಲದ ಬದುಕಿನಲ್ಲಿದ್ದ ರಾಣಿಯು ಮಾವುತ ಬದುಗನಲ್ಲಿ ಅನುರಕ್ತಳಾದಾಗ ಆಕೆಯ ಗೊಂದಲಗಳಿಗೆಲ್ಲಾ ಸ್ಪಷ್ಟ ಉತ್ತರ ದೊರಕಿದಂತಾಗುತ್ತದೆ."ಪುಣ್ಯವೆಂದರೆ ಇದೇ ಇರಬೇಕು ಇಲ್ಲವಾದಲ್ಲಿ ಒಂದು ಹೆಣ್ಣಿಗೆ ಅದೂ ಒಂದು ಜನ್ಮದ ಅವಧಿಯಲ್ಲಿ ಬಯಸಿದ್ದೆಲ್ಲಾ ಸಿಗಬೇಕೆಂದರೆ ಪುಣ್ಯದ ಫಲವಲ್ಲವೇ.ಕಳೆದ ರಾತ್ರಿಯ ನಂತರ ನನ್ನ ಬದುಕು ಸ್ವರ್ಗಕ್ಕೆ ಕೊಳ್ಳಿ ಕೊಟ್ಟ ಹಾಗಿದೆ. ಒಂದೆಡೆ ಅರಸುತನ ತಾಯ್ತನ ಇನ್ನೊಂದೆಡೆ ನೊಂದ ಮೈ ಮನಸ್ಸುಗಳಿಗೆ ನೆನ್ನೆ ಸಿಕ್ಕ ಉತ್ತರ ನಾನೀಗ ತೃಪ್ತಳಾಗಿದ್ದೇನೆ".

"ಅವನ ಹಾಡಿನಲ್ಲಿ, ಸ್ಪರ್ಶದಲ್ಲಿ ಮೋಡಿಯಿದೆ. ಅರಸನೊಂದಿಗೆ ರೋಮಾಂಚನಗೊಳ್ಳದ ಮೈ ಮನಸ್ಸು ಅವನಿಗಾಗಿ ಕನವರಿಸುತ್ತಿದೆ. ಯಾಕೆ ಈ ಕತ್ತಲಿನ ಅಮಾನ್ಯ ಬದುಕೇ ಪ್ರಿಯವಾಗುತ್ತಿದೆ. ಈ ಬದುಗ ನನಗಾಗಿ ಕೇವಲ ನನಗಾಗಿ ಕಾಯುತ್ತಾನೆ. ನಾನು ಅವನಿಗಾಗಿ ಕಾಯುತ್ತೇನೆ". ರಾಣಿಯ ಈ ಮಾತುಗಳಲ್ಲಿ ಆಕೆಯ ದೇಹ ಮತ್ತು ಮನಸ್ಸನ್ನು ತೃಪ್ತಿಪಡಿಸುವವ ಬದುಗನಾಗಿದ್ದಾನೆ. ಬದುಗನಿಗಾಗಿಯೇ ತನ್ನ ಮಗು, ರಾಜ, ಅರಮನೆ ಸಿರಿಸಂಪತ್ತೆಲ್ಲವನ್ನು ತ್ಯಜಿಸಲು ಸಿದ್ಧಳಾದ ರಾಣಿಗೆ ಬದುಗ ತಕ್ಕವನಲ್ಲವೆಂಬುದು ಆತನ ಮಾತು ವರ್ತನೆಗಳಿಂದ ಅರಿಯಬಹುದು. ರಾಜನಿಂದ ಮರೆಯಾಗಿ ಬರಲು ತಡವಾದಾಗ ಆಕೆಯನ್ನು ಬದುಗ ಕಾಮಾತಿರೇಕದಿಂದ ದಂಡಿಸಿ ಒದೆಯುವ ಆತ ಅಮೃತಮತಿಗೆ ನನ್ನನ್ನು ಅರಸಿ ಬಂದವರಲ್ಲಿ ನೀನೇನು ಮೊದಲಿನವಳಲ್ಲ ಹಾಗೆ ಕೊನೆಯವಳೂ ಅಲ್ಲ ಎಂಬ ಆತನ ಮಾತುಗಳಲ್ಲಿ ಅಮೃತಮತಿಯೇನು ಈತನಿಗೆ ಒಬ್ಬಳಲ್ಲ ಹಾಗೆಯೇ ಕೊನೆಯೂ ಅಲ್ಲ. ಸಾಕಷ್ಟು ಹೆಣ್ಣುಗಳು ಈಗಾಗಲೆ ಈತನ ಸ್ಪರ್ಶಕ್ಕೆ ಬಂದಿದ್ದಾರೆ, ಮುಂದೆ ಈತನನ್ನು ಬಯಸಿ ಬಂದ ಹೆಣ್ಣುಗಳನ್ನು ಈತನೇನು ರಾಣಿಗಾಗಿ ತ್ಯಜಿಸುವುದಿಲ್ಲ ಎಂಬುದು ಅರಿವಾಗುತ್ತದೆ. ಈತನಿಗೂ ರಾಜ ಯಶೋಧರನಿಗೂ ಯಾವ ವ್ಯತ್ಯಾಸಗಳಿಲ್ಲ ಹಾಗೂ ಅಮೃತಮತಿಯ ಪ್ರೀತಿಗೆ ಈತ ತಕ್ಕನಾದ ಪ್ರಿಯಕರನಲ್ಲ ಎಂಬುದು ಅರಿವಾಗುತ್ತದೆ. ಏನೇ ಆದರೂ ರಾಣಿ ಮಾತ್ರ ತನ್ನ ಅರಸುತನದ ಹೊರೆ, ಸಿರಿತನದ ಬೆಳದಿಂಗಳು ಬಾಹ್ಯಕ್ಕೆ ಏನು ಕೊರತೆಯಿಲ್ಲದ ರಾಣಿ ತನ್ನ ಅಂತರಂಗದ ಕೊರತೆಗಳನ್ನು ಹಾಗೂ ಮಾನಸಿಕ ನೆಮ್ಮದಿಯನ್ನು ಹುಡುಕಲು, ಸಮಾಜ ಸಂಪ್ರದಾಯದ ಹೆಸರಿನಲ್ಲಿ ಹೇರಿರುವ ಪಾತಿವ್ರತ್ಯದ ಕಟ್ಟುಗಳಿಂದ ಹೊರಬರಬೇಕೆಂಬ ಆಲೋಚನೆಯನ್ನು ಆಕೆಯ ಮಾತುಗಳಲ್ಲಿ ಕಾಣಬಹುದು "ನಾವು ಹೆಂಗಸರು ಎಡವೋದು ಲೋಕ ಮೆಚ್ಚೋದು ಆಹಾ ಅನ್ನೋದು ಇಂತಹ ತೋರಿಕೆಯ

ಸಂಸಾರವನ್ನೇ. ಇಲ್ಲಿ ನಾನು ದಿನನಿತ್ಯ ಕುದಿಯುತ್ತಿದ್ದೇನೆ. ಈ ಕುದಿತದಲ್ಲೇ ಎಲ್ಲರನ್ನೂ ಮೆಚ್ಚಿಸುತ್ತಾ ಮೆಚ್ಚಿಸುತ್ತಾ ನಾನು ಏನು ಅನ್ನೋದೇ ಮರೆತು ಹೋಗುತ್ತಿದೆ. ಎಂಬುದರಲ್ಲಿ ಹೆಣ್ಣು ಹೊರಗಿನ ಸಮಾಧಾನಕ್ಕಾಗಿ ಬದುಕುತ್ತಾಳೆಯೇ ಹೊರತು ಒಳಗಿನ ಸಮಾಧಾನಕ್ಕಾಗಿ ಅಲ್ಲ ಹೊರಗಿನ ತೋರಿಕೆಯ ಬದುಕಿಗಾಗಿ ನಾವು ನಮ್ಮನ್ನು ಮರೆಯಬಾರದೆಂಬ ಸೂಚನೆಯಿದೆ.

“ಹೆಣ್ಣು ಭೂಮಿಯ ಹಾಗೆ, ಸೋತು ಬಂದವರಿಗೆ ನೆರಳು ಕೊಡುವ, ಬಾಯಾರಿದವರಿಗೆ ನೀರುಣಿಸುವ, ಹಸಿದವರಿಗೆ ಅನ್ನ ನೀಡುವ ನೆಲೆ, ಹಸಿದ ಶಿಶುವಿಗೆ ಮೊಲೆಯೂಡಿಸುವ ಒಲಿದವನಿಗೆ ಎದೆಯ ಗೂಡಲಿ ಬೆಚ್ಚಗಿನ ಆಶ್ರಯ ಕೊಡುವ ತಾಣ ಹಾಗೆಂದು ಸಿಕ್ಕಾಪಟ್ಟೆ ದೌರ್ಜನ್ಯ ನಡೆಸಿ ಮನದ ಮಾತನ್ನು ಹತ್ತಿಕ್ಕಿದರೆ ಅವನು ಭೂಮಿಯ ಮೇಲೆ ಹೇಗೆ ಕಾಲೂರಿ ನಿಲ್ಲ ಬಲ್ಲ ನಾನು ಪ್ರಕೃತಿ ಮಾದೇವಿ. ಆನ ನನ್ನ ಕಡಿದರು ಎಂದು ತುಂಡರಿಸಿದರು ಎಂದು ಸುಮ್ಮನಿರುವವಳಲ್ಲ ನಾನು ಆಕಾಶದ ಕಡೆಗೆ ಜಿಗಿದು ನಿಲ್ಲುತ್ತೇನೆ. ತುಳಿಸಿಕೊಂಡಷ್ಟು ಗಟ್ಟಿಯಾಗುತ್ತೇನೆಂಬ ಮರದಲ್ಲಿ ಚಿಗುರಿ ಹೂವಾಗುತ್ತೇನೆ ಮತ್ತೇ ಹೆಣ್ಣಾಗಿ ನಿಲ್ಲುತ್ತೇನೆ. ತುಳಿದರೂ ನೆಲದೊಳಗೆ ಅವಿತುಕೊಳ್ಳುವುದಿಲ್ಲ. ಈ ಭೂಮಿಯ ಗರ್ಭದಲ್ಲಿ ಏನಿದೆ ಗೊತ್ತೇ ಮುತ್ತು, ಹವಳ, ಚೂಪಾದ ಆಯುಧ ಜ್ವಲಿಸುವ ಜ್ವಾಲಾಮುಖಿ, ತೂಗುವ ತೊಟ್ಟಿಲು ಇನ್ನೂ ಏನೇನೋ ಕಲ್ಲು ಮಣ್ಣುಗಳಿಂದಲೇ ಕಟ್ಟಿದ ಅರಮನೆ ಈ ಪಟ್ಟ ನನಗೀಗ ಬೇಡ ಈ ಎಲ್ಲಾ ಪದವಿಗಳಿಂದಾಚೆಯ ರಸ ಒಸರುವ ಪದಗಳಿಂದಾದ ಬದುಕು ನನಗೆ ಬೇಕು ಇಷ್ಟು ದಿನ ಇವೆಲ್ಲಾ ನನಗೆ ಅರ್ಥವಾಗುತ್ತಿರಲಿಲ್ಲ ಗೊಂದಲವಿತ್ತು. ದಾರಿಕಂಡಿರಲಿಲ್ಲ ಈಗ ನನ್ನ ಕಣ್ಣು ದಾರಿಯನ್ನು ನಿಚ್ಚಳವಾಗಿ ಗುರುತಿಸಿದೆ ಜನ ನನ್ನನ್ನು ಹಾದರಗಿತ್ತಿ ಎನ್ನಬಹುದೇ? ಎನ್ನಲಿ ಜನರ ಹಾವ ನಾಲಿಗೆಯಲ್ಲಿ ಹೊರಳಿದರೂ ನಾನು ಅಂಜುವುದಿಲ್ಲ”. ಎಂಬ ಅಮೃತಮತಿಯ ಮಾತುಗಳಲ್ಲಿ ಸಮಾಜದ ಕಟ್ಟುಪಾಡುಗಳನ್ನು ಮೀರಿ ಬೆಳೆಯುತ್ತಿರುವ ಹೆಣ್ಣಿನ ಮನಸ್ಥಿತಿಯ ಅರಿವು ಓದುಗರಿಗೆ ಪರಿಚಯವಾಗುತ್ತದೆ.

ಹೀಗೆ ಭೂಮಿಯಲ್ಲ ಇವಳು ನಾಟಕವು ಬದಲಾದ ಹೆಣ್ಣಿನ ಮನಸ್ಥಿತಿಯೊಂದಿಗೆ ಮಹಿಳೆಯರ ಆಲೋಚನಾ ರೀತಿಯೂ ಬದಲಾವಣೆಯಾಗಿರುವುದನ್ನು ಗುರುತಿಸಬಹುದು. ಹೆಣ್ಣು ಪುರುಷ ಸಮಾಜ ನಿರ್ಮಿಸಿರುವ ಕಟ್ಟುಪಾಡುಗಳನ್ನು ನಿಬಂಧನೆಗಳನ್ನು ಮೀರಿ ಬೆಳೆಯಬೇಕೆಂಬ ಮಹಿಳಾಪರ ಆಲೋಚನೆಗಳನ್ನು ನಾಟಕವು ಧ್ವನಿಸುತ್ತದೆ. ಅಮೃತಮತಿಯು ತನ್ನ ದೇಹ ಮತ್ತು ಮನಸ್ಸಿನ ಮೇಲೆ ತಾನೇ ಹಿಡಿತವನ್ನು ಹೊಂದಿ ಪ್ರಶ್ನಿಸಿದಾಗ ರಾಜನಿಗೂ ಹಾಗೂ ರಾಜಮಾತೆಗೂ ಧೈರ್ಯದಿಂದಲೇ ಉತ್ತರಿಸುವ ಪರಿ ಸ್ತ್ರೀವಾದಿ ಚಿಂತನೆಯ ನೆಲೆಗಟ್ಟಿನಲ್ಲಿಯೂ ಗೋಚರವಾಗುತ್ತದೆ. ಹೀಗೆ ಪೌರಾಣಿಕ ಪಾತ್ರಗಳ ಮೂಲಕ ವರ್ತಮಾನದ ಬದುಕಿನ ಬವಣೆಗಳನ್ನು ಮೀರಿ ಮಹಿಳೆ ತನ್ನ ಸ್ವಂತಿಕೆಗಾಗಿ ಬದುಕಬೇಕಾದರೆ ಆಕೆಯ ಆಲೋಚನಾ ಪರಿ ಬದಲಾಗಬೇಕೆಂಬುದನ್ನು ಭೂಮಿಯಲ್ಲ ಇವಳು ನಾಟಕವು ಧ್ವನಿಸುತ್ತದೆ.

**ಪರಾಮರ್ಶನ ಗ್ರಂಥಗಳು:**


1. ಜನ್ನ (ಲೇಖಕ) ಮತ್ತು ಕೆ. ವಿ. ರಾಘವಾಚಾರ್ (ಸಂಪಾದಕರು), (1973), ಯಶೋಧರ ಚರಿತೆ, ಮೈಸೂರು: ಪ್ರಸಾರಾಂಗ, ಮೈಸೂರು ವಿ.ವಿ.
2. ನಾರಾಯಣ ಬಿ. ಪವಾರ (ಸಂಪಾದಕರು), (2002), ಮಹಿಳಾ ನಾಟಕಗಳು, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
3. ಡಾ. ವಿಜಯಾದೇವಿ (ಸಂಪಾದಕರು), (1998), ಆಧುನಿಕ ಕನ್ನಡ ಮಹಿಳಾ ಸಾಹಿತ್ಯ ಚರಿತ್ರೆ – ನಾಟಕ, ಹಂಪಿ: ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
4. ಹೆಚ್. ಎಸ್. ರಾಘವೇಂದ್ರರಾವ್ (ಸಂಪಾದಕರು), (2001), ಶತಮಾನದ ಸಾಹಿತ್ಯ ವಿಮರ್ಶೆ, ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿ.
5. ತೀ. ನಂ. ಶ್ರೀಕಂಠಯ್ಯ, (2004), ತೀ. ನಂ. ಶ್ರೀ. ಸಮಗ್ರ ಗದ್ಯ (ಜನ್ನನ ಕಾವ್ಯಗಳಲ್ಲಿ ಪ್ರಣಯ ನಿರೂಪಣೆ), ಬೆಂಗಳೂರು: ಕನ್ನಡ ಪುಸ್ತಕ ಪ್ರಾಧಿಕಾರ.